ಮಕ್ಕಳ ಬುದ್ಧಿ ಭಾವಗಳ ವಿಕಾಸದಲ್ಲಿ ಶಾಲೆ ಪ್ರಧಾನ ಪಾತ್ರವಹಿಸುತ್ತದೆ. ಅಲ್ಲಿನ ಕಲಿಕೆ ಸಾಂಪ್ರದಾಯಿಕವಾಗಿದ್ದರೂ ಅಕ್ಷರದ ಮೂಲಕ ಲೋಕ ಜ್ಞಾನ ವಿಸ್ತರಿಸುತ್ತದೆ. ಕೌಶಲ ಮತ್ತು ಆತ್ಮವಿಶ್ವಾಸದ ಸ್ಪಷ್ಟ ರೂಪ ತುಂಬುವ ಶಾಲೆ ಸಾರ್ಥಕ ಬದುಕಿಗೆ ಸಾಕ್ಷಿಯಾಗುತ್ತದೆ. ಇದನ್ನು ನಮ್ಮ ಸಂವಿಧಾನ ಮೂಲ ಹಕ್ಕು ಎಂದೇ ಪರಿಭಾವಿಸಿದೆ. ಮಹತ್ವದ ಶಿಕ್ಷಣವನ್ನು ಎಲ್ಲ ಸಂದರ್ಭದಲ್ಲಿ ಏಕರೂಪದಲ್ಲೇ ನೋಡಲು ಆಗದು. ಬೌದ್ಧಿಕ, ಮಾನಸಿಕ, ದೈಹಿಕ ಸಮಸ್ಯೆಯ ಜೊತೆ ಸೆಣಸಾಡುವ ಮಕ್ಕಳ ಹಿತಕ್ಕೆ ಅದನ್ನು ಹೊಂದಿಸುವ ಅಗತ್ಯವಿದೆ. ಶೈಕ್ಷಣಿಕ ಸ್ಪರ್ಧೆಯ ಸಂದರ್ಭದಲ್ಲಿ ವಿಶೇಷ ಮಕ್ಕಳ ಸ್ವಾವಲಂಬನೆಗೆ ಬುನಾದಿಯಾಗುವ ಮಾದರಿ ಶಿಕ್ಷಣ ಹೇಗಿರಬೇಕು ಎನ್ನುವ ಅಂಶವನ್ನು ವಿಷಯ ಪರಿಣತರು ತಮ್ಮ ಅನುಭವದ ಸಾರವನ್ನು 'ಸುಧಾ' ಜೊತೆ ಹಂಚಿಕೊಂಡಿದ್ದಾರೆ.

■ ರಾಘವೇಂದ್ರ ಕೆ. ತೊಗರ್ಸಿ

# ಎಲ್ಲರಂತಲ್ಲದ ಮಕ್ಕಳ ಪೋಷಣೆ



## ನ್ಯೂನತೆಗೆ ಗುರುತಿಸುವಿಕೆಯೇ ಪರಿಹಾರ